# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಪೂಶಿಇ/ಆಡಳಿತ ಎ/ಅ.ಉನೇ/01/2018-19 ದಿನಾಂಕ:21.02.2019

## ಜ್ಞಾಪನ

ವಿಷಯ: ಅತಿಥಿ ಉಪನ್ಯಾಸಕರುಗಳಿಗೆ ವೇತನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶದ ಸಂಖ್ಯೆ: ಇಡಿ 79 ಡಿಜಿಡಿ 2018 ದಿನಾಂಕ:02.07.2018

2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:06.07.2018
3. ಈ ಕಚೇರಿ ಸಮ ಸಂಖ್ಯೆ ಜ್ಞಾಪನ ದಿನಾಂಕ:27.10.2018
4. ಅತಿಥಿ ಉಪನ್ಯಾಸಕರುಗಳಿಗೆ ವೇತನ ಬಿಡುಗಡೆ ಮಾಡಲು ಕೋರಿ ವಿವಿಧ ಜಿಲ್ಲೆಗಳಿಂದ ಜಿಲ್ಲಾ ಉಪ ನಿರ್ದೇಶಕರುಗಳು ಸಲ್ಲಿಸಿರುವ ಪ್ರಸ್ತಾವನೆಗಳು.

****

ಸರ್ಕಾರವು ಉಲ್ಲೇಖಿತ (1) ರ ಆದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಷರತ್ತಿಗೊಳಪಟ್ಟು ಅನುಮತಿ ನೀಡಲಾಗಿದ್ದರಿಂದ ಉಲ್ಲೇಖ (2) ರ ಈ ಕಚೇರಿ ಜ್ಞಾಪನದಲ್ಲಿ ಜಿಲ್ಲಾ ಉಪನಿರ್ದೇಶಕರುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಮರು ಹಂಚಿಕೆ ಮಾಡಿ ಈಗಾಗಲೇ ಆದೇಶಿಸಲಾಗಿತ್ತು.

ಅದರಂತೆ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ, ನಿವೃತ್ತಿ, ಬಡ್ತಿ, ವರ್ಗಾವಣೆ ಹೀಗೆ ವಿವಿಧ ಕಾರಣಗಳಿಂದ ತೆರವಾದ ಉಪನ್ಯಾಸಕ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ಜಿಲ್ಲಾ ಉಪನಿರ್ದೇಶಕರು ನೇಮಕ ಮಾಡಿಕೊಂಡು, ಸದರಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಬಿಡುಗಡೆ ಮಾಡುವಂತೆ ಕೋರಿ ಉಲ್ಲೇಖಿತ ಪತ್ರ (4) ರಲ್ಲಿ ಕೋರಿಕೆ ಸಲ್ಲಿಸಿರುತ್ತಾರೆ.

ಉಲ್ಲೇಖಿತ 03 ರ ಈ ಕಛೇರಿ ಜ್ಞಾಪನದಲ್ಲಿ 2018-19 ನೇ ಶೈಕ್ಷಣಿಕ ಸಾಲಿಗೆ ಸದರಿ ಅತಿಥಿ ಉಪನ್ಯಾಸಕರುಗಳಿಗೆ ಮೂರು ತಿಂಗಳ ಅವಧಿಗೆ ಅಂದರೆ, ಜುಲೈ 2018 ರಿಂದ ಸೆಪ್ಟಂಬರ್ 2018 ರವರೆಗೆ ಮಾತ್ರ ಗೌರವಧನವನ್ನು ಜಿಲ್ಲಾವಾರು ಬಿಡುಗಡೆ ಮಾಡಿ ಆದೇಶಿಸಲಾಗಿತ್ತು. ಮುಂದುವರೆದು ಅಕ್ಟೋಬರ್-2018 ರಿಂದ ಫೆಬ್ರವರಿ-2019 ರವರೆಗೆ ಅತಿಥಿ ಉಪನ್ಯಾಸಕರಿಗೆ ಮಾಸಿಕ ರೂ. 9000/- (ಒಂಭತ್ತು ಸಾವಿರ) ಗಳಂತೆ ಗೌರವಧನವನ್ನು ಜಿಲ್ಲಾವಾರು ಈ ಕೆಳಕಂಡಂತೆ ಬಿಡುಗಡೆ ಮಾಡಿ ಆದೇಶಿಸಿದೆ.

ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳು ಉಲ್ಲೇಖ (1) ರ ಸರ್ಕಾರದ ಆದೇಶ ಹಾಗೂ ಅದರಲ್ಲಿನ ಷರತ್ತುಗಳನ್ವಯ ಮತ್ತು ಸದರಿ ಅತಿಥಿ ಉಪನ್ಯಾಸಕರುಗಳು ಕಾರ್ಯ ನಿರ್ವಹಿಸಿರುವುದನ್ನು ಖಚಿತಪಡಿಸಿಕೊಂಡು, ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಮಾತ್ರ ವೇತನ ಬಿಡುಗಡೆಗೆ ಕ್ರಮವಹಿಸತಕ್ಕದ್ದು. ಹಾಗೂ ಬಳಕೆಯಾದ ಹಣ ಮೊತ್ತದ ವಿವರಗಳನ್ನು ವಿತರಣೆಯಾದ ಕೂಡಲೇ ಕೇಂದ್ರ ಕಚೇರಿಯ ಲೆಕ್ಕಪತ್ರ ಶಾಖೆಗೆ ಕ್ರೋಢೀಕರಿಸಿ ಸಲ್ಲಿಸಲು ಸೂಚಿಸಿದೆ.

## ಜಿಲ್ಲಾವಾರು ಹಂಚಿಕೆ ಮಾಡಿದ ಅತಿಥಿ ಉಪನ್ಯಾಸಕರ ವಿವರ.

| 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರು ಮಾಡಿರುವ ಅತಿಥಿ ಉಪನ್ಯಾಸಕರ ವಿವರ | | | | | | |
|---|---|---|---|---|---|---|
| ಕ್ರ.ಸಂ | ಜಿಲ್ಲೆಗಳು | ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿರುವ ಅತಿಥಿ ಉಪನ್ಯಾಸಕರ ಸಂಖ್ಯೆ | ಜಿಲ್ಲಾ ಮಟ್ಟದ ಅಧಿಕಾರಿಗಳು ನೇಮಕಾತಿ ಮಾಡಿಕೊಂಡಿರುವ ಉಪನ್ಯಾಸಕರ ಸಂಖ್ಯೆ: | 2018-19 ನೇ ಸಾಲಿಗೆ ಬಿಡುಗಡೆ ಮಾಡಬೇಕಾದ ಗೌರವಧನದ ಮೊತ್ತ | ಈಗಾಗಲೇ ಬಿಡುಗಡೆ ಮಾಡಿದ ಗೌರವಧನದ ಮೊತ್ತ ರೂ.ಗಳಲ್ಲಿ | ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಗೌರವಧನದ ಮೊತ್ತ ರೂ.ಗಳಲ್ಲಿ |
| 01 | ಬೆಂಗಳೂರು ಉತ್ತರ | 31 | 33 | 2227500 | 837000 | 1390500 |
| 02 | ಬೆಂಗಳೂರು ದಕ್ಷಿಣ | 30 | 18 | 1215000 | 810000 | 405000 |
| 03 | ಬೆಂಗಳೂರು ಗ್ರಾಮಾಂತರ | 46 | 34 | 2295000 | 1242000 | 1053000 |
| 04 | ರಾಮನಗರ | 70 | 51 | 3442500 | 1890000 | 1552500 |
| 05 | ಬಳ್ಳಾರಿ | 117 | 129 | 8707500 | 3159000 | 5548500 |
| 06 | ಚಿಕ್ಕೋಡಿ | 70 | 78 | 5265000 | 1890000 | 3375000 |
| 07 | ಬೆಳಗಾವಿ | 125 | 82 | 5535000 | 3375000 | 2160000 |
| 08 | ಬಾಗಲಕೋಟೆ | 118 | 74 | 4995000 | 3186000 | 1809000 |
| 09 | ವಿಜಯಪುರ | 69 | 60 | 4050000 | 1863000 | 2187000 |
| 10 | ಬೀದರ್ | 77 | 75 | 5062500 | 2079000 | 2983500 |
| 11 | ದಾವಣಗೆರೆ | 71 | 64 | 4320000 | 1917000 | 2403000 |
| 12 | ಚಿತ್ರದುರ್ಗ | 70 | 50 | 3375000 | 1890000 | 1485000 |
| 13 | ಚಿಕ್ಕಮಗಳೂರು | 111 | 96 | 6480000 | 2997000 | 3483000 |
| 14 | ಗದಗ | 86 | 75 | 5062500 | 2322000 | 2740500 |
| 15 | ಹಾವೇರಿ | 76 | 67 | 4522500 | 2052000 | 2470500 |
| 16 | ಧಾರವಾಡ | 50 | 50 | 3375000 | 1350000 | 2025000 |
| 17 | ಕಲ್ಬುರ್ಗಿ | 100 | 100 | 6750000 | 2700000 | 4050000 |
| 18 | ಯಾದಗಿರಿ | 98 | 101 | 6817500 | 2646000 | 4171500 |
| 19 | ಹಾಸನ | 150 | 162 | 10935000 | 4050000 | 6885000 |
| 20 | ಚಿಕ್ಕಬಳ್ಳಾಪುರ | 84 | 61 | 4117500 | 2268000 | 1849500 |
| 21 | ಕೋಲಾರ | 100 | 100 | 6750000 | 2700000 | 4050000 |
| 22 | ಚಾಮರಾಜನಗರ | 39 | 39 | 2632500 | 1053000 | 1579500 |
| 23 | ಮೈಸೂರು | 154 | 160 | 10800000 | 4158000 | 6642000 |
| 24 | ಮಂಡ್ಯ | 117 | 86 | 5805000 | 3159000 | 2646000 |
| 25 | ಉತ್ತರ ಕನ್ನಡ | 97 | 124 | 8370000 | 2619000 | 5751000 |
| 26 | ಕೊಪ್ಪಳ | 103 | 103 | 6952500 | 2781000 | 4171500 |
| 27 | ರಾಯಚೂರು | 172 | 162 | 10935000 | 4644000 | 6291000 |
| 28 | ದಕ್ಷಿಣ ಕನ್ನಡ | 217 | 175 | 11812500 | 5859000 | 5953500 |
| 29 | ಉಡುಪಿ | 77 | 102 | 6885000 | 2079000 | 4806000 |
| 30 | ಶಿವಮೊಗ್ಗ | 88 | 59 | 3982500 | 2376000 | 1606500 |
| 31 | ತುಮಕೂರು | 141 | 169 | 11407500 | 3807000 | 7600500 |
| 32 | ಕೊಡಗು | 43 | 43 | 2902500 | 1161000 | 1741500 |
| | **ಒಟ್ಟು** | **2997** | **2782** | **18,77,85,000=00** | **8,09,19,000=00** | **10,68,66,000=00** |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ